ದಿನಾಂಕ **: 11.02.2026** ರಂದು ಡಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಎಂ.ಸಿ.ಕೆ. , ವಾದಿ ಪರ ವಕೀಲರಿಂದಃ

ನಾನು 2 ಮತ್ತು 3 ನೇ ಪ್ರತಿವಾದಿಯರ ಪರವಾಗಿಯೂ ಸಹಾ ಸಾಕ್ಷಿ ಹೇಳುತ್ತಿದ್ದೇನೆ. ನಾನು 1982 ರಲ್ಲಿ ಜನಿಸಿದ್ದೇನೆ. ಆದ್ದರಿಂದ ಜಿನ್ನಪ್ಪ ಹೆಗ್ಗಡೆ ಯವರು ಯಾವಾಗ ಮರಣ ಹೊಂದಿದ್ದಾರೆ ಎಂದು ವೈಯಕ್ತಿಕವಾಗಿ ನನಗೆ ಮಾಹಿತಿ ಇಲ್ಲ. ಆದರೆ ದಾಖಲೆ ಪರವಾಗಿ ತಿಳಿದುಕೊಂಡಿದ್ದೇನೆ. ನನಗೆ ಜೈನ ಉತ್ತರಾಧಿಕಾರ ಕಾಯ್ದೆಯ ಬಗ್ಗೆ ಸ್ವಂತವಾಗಿ ಮಾಹಿತಿ ಇದೆ. ಜಿನ್ನಪ್ಪ ಹೆಗ್ಗಡೆಯವರು 1956 ಕ್ಕಿಂತ ಪೂರ್ವದಲ್ಲಿ ಮರಣ ಹೊಂದಿದ್ದಾರೆ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇದೆ. ಅವರಿಗೆ ಗುಂಡು ಹೊಡೆದು ಅವರು ಮರಣ ಹೊಂದಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣ ದಾಖಲೆ ಆಗಿರುವುದರ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಕ್ರಿಮಿನಲ್ ಪ್ರಕರಣದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಲ್ಲಿ ಜಿನ್ನಪ್ಪ ಹೆಗ್ಗಡೆಯವರ ಸಾವಿನ ದಿನಾಂಕದ ನಿಖರವಾದ ಮಾಹಿತಿ ಸಿಗುತ್ತದೆ ಎಂದರೆ ಸರಿ.

1 ನೇ ಪ್ರತಿವಾದಿ ನನಗೆ ದೊಡ್ಡಪ್ಪನಾಗುತ್ತಾರೆ. ಅವರು ಕಾರ್ಕಳದಲ್ಲಿ ವಕೀಲ ವೃತ್ತಿಯನ್ನು 1960 ನೇ ದಶಕದಲ್ಲಿ ಪ್ರಾರಂಭಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ಸಂಬಂಧ ಚೆನ್ನಾಗಿತ್ತು. ಸದರಿ ಕ್ರಿಮಿನಲ್ ಪ್ರಕರಣದಲ್ಲಿ 1 ನೇ ಪ್ರತಿವಾದಿ ಮತ್ತು ನನ್ನ ತಂದೆ ಅಭಿಯೋಜಕರಿಗೆ ಸಹಾಯ ಮಾಡುತ್ತಿದ್ದರು ಎಂದರೆ, ನನ್ನ ತಂದೆ ಆ ಸಮಯದಲ್ಲಿ ಸುಮಾರು 4 ಅಥವಾ 5 ವರ್ಷದವರಿರಬಹುದು.

ನಮ್ಮ ಕುಟುಂಬದ ಸ್ವತ್ತುಗಳು ಸುಮಾರು 3 ತಾಲೂಕುಗಳಲ್ಲಿ ಇರುತ್ತದೆ. ಕ್ರಿಮಿನಲ್ ಪ್ರಕರಣವಲ್ಲದೇ ಟ್ರಿಬ್ಯುನಲ್ ಮತ್ತು ಸಿವಿಲ್ ಪ್ರಕರಣಗಳು ಆ ಸಮಯದಲ್ಲಿ ಚಾಲ್ತಿಯಲ್ಲಿದ್ದವು ಎಂದರೆ ಸರಿ. ಎಲ್ಲಾ ಪ್ರಕರಣಗಳಲ್ಲಿ 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದು, ನನ್ನ ತಂದೆ ವಯಸ್ಸಿಗೆ ಬಂದ ನಂತರ ಅವರೂ ಸಹಾ 1 ನೇ ಪ್ರತಿವಾದಿಯ ಜೊತೆ ಸಹಕರಿಸುತ್ತಿದ್ದರು ಎಂದರೆ ಸರಿ. ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಪಟ್ಟ ದಾಖಲೆಗಳು ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ವಶದಲ್ಲಿತ್ತು ಎಂದರೆ ಸರಿ.

ನನ್ನ ಪ್ರಕಾರ ಜಿನ್ನಪ್ಪ ಹೆಗ್ಗಡೆಯವರು ಮರಣ ಹೊಂದಿದ ನಂತರ ಅವರ ಪತ್ನಿಯಾದ ಪದ್ಮಾವತಿಯವರಿಗೆ ದಾವಾ ಸ್ವತ್ತಿನಲ್ಲಿ 3 ರಲ್ಲಿ 1 ಅಂಶದ ಪಾಲು ಇರುತ್ತದೆ. ನಾನು ಜಿನ್ನಪ್ಪ ಹೆಗ್ಗಡೆಯವರ ಮರಣ ಪ್ರಮಾಣ ಪತ್ರವನ್ನು

ನೋಡಿದ್ದೇನೆ. ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ನಾನು ಜೆನ್ನಪ್ಪ ಹೆಗ್ಗಡೆಯವರ ಮರಣ ಪ್ರಮಾಣ ಪತ್ರವನ್ನು ನಮ್ಮ ಮನೆಯಲ್ಲಿ ನೋಡಿದ್ದೇನೆ. ಸದರಿ ಮರಣ ಪ್ರಮಾಣ ಪತ್ರವನ್ನು ಯಾವಾಗ ಪಡೆಯಲಾಗಿದೆ ಎಂದು ನನಗೆ ತಿಳಿದಿಲ್ಲ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಸದರಿ ಮರಣ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯ ಬಳಿ ಮಾತುಕತೆ ನಡೆಸಿರುವುದಿಲ್ಲ. ನಾನು ಹೇಳುವಂತಹ ಮರಣ ಪ್ರಮಾಣ ಪತ್ರವನ್ನು ನಾವೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಿಸುವಾಗ ಜೆನ್ನಪ್ಪ ಹೆಗ್ಗಡೆಯವರಿಗೆ ಸಂಬಂಧಿಸಿದ ಮರಣ ಪ್ರಮಾಣ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಪ್ರಕರಣ ದಾಖಲಿಸುವಾಗಲೂ ನನ್ನ ಮತ್ತು 1 ನೇ ಪ್ರತಿವಾದಿಯ ಸಂಬಂಧ ಚೆನ್ನಾಗಿತ್ತು. ಈಗ ನಮ್ಮ ಮತ್ತು 1 ನೇ ಪ್ರತಿವಾದಿಯ ಸಂಬಂಧ ಚೆನ್ನಾಗಿರುವುದಿಲ್ಲ. 1 ನೇ ಪ್ರತಿವಾದಿಯು ನ್ಯಾಯಾಲಯದಲ್ಲಿ ಪ್ರತಿವಾದ ಪತ್ರ ಸಲ್ಲಿಸುವ ಸಮಯದಲ್ಲಿ ನಮ್ಮ ಸಂಬಂಧ ಚೆನ್ನಾಗಿತ್ತು. ನಾನು 2023 ರಲ್ಲಿ ನ್ಯಾಯಾಲಯದಲ್ಲಿ ವಕೀಲರ ಮೂಲಕ ಹಾಜರಾಗಿರುತ್ತೇನೆ. ಅಲ್ಲಿಯವರೆಗೂ ಈ ದಾವೆಯಲ್ಲಿ ನಾನು ಯಾವ ಕಾರಣಕ್ಕಾಗಿ ಹಾಜರಾಗಿರುವುದಿಲ್ಲ ಎಂದು ಪ್ರಶ್ನಿಸಿದಾಗ, ನ್ಯಾಯಾಲಯದಿಂದ ಬಂದಂತಹ ಸಮನ್ಸನ್ನು 1 ನೇ ಪ್ರತಿವಾದಿಗೆ ನೀಡಿದ್ದು, ಅವರೇ ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ತಿಳಿಸಿದ ಕಾರಣ ನಾವು ಹಾಜರಾಗಿರುವುದಿಲ್ಲ. ಆ ಸಮಯದಲ್ಲಿ 1 ನೇ ಪ್ರತಿವಾದಿಯು ಏನು ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದು ನಾನು ತಿಳಿದುಕೊಂಡಿರುವುದಿಲ್ಲ.

1953 ನೇ ಇಸವಿಯಲ್ಲಿ ನನ್ನ ಅಜ್ಜ ಜಿನ್ನಪ್ಪ ಹೆಗ್ಗಡೆಯವರು ಮರಣ ಹೊಂದಿದ್ದಾರೆ ಎಂದು ತೋರಿಸಲು ನನ್ನ ಬಳಿ ಇರುವ ಮರಣ ಪ್ರಮಾಣ ಪತ್ರದ ನಕಲನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. 1 ನೇ ಪ್ರತಿವಾದಿಯು ಹಾಜರುಪಡಿಸಿರುವ ನನ್ನ ಅಜ್ಜನ ಮರಣ ಪ್ರಮಾಣಪತ್ರವನ್ನು ನಾನು ನೋಡಿದ್ದೇನೆ. ಅದನ್ನು ಈ ಪ್ರಕರಣ ದಾಖಲಿಸಿದ ನಂತರ ಪಡೆಯಲಾಗಿದೆ ಎಂದು ಕಂಡು ಬರುತ್ತದೆ ಎಂದರೆ, ಇದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ನನ್ನ ಬಳಿ ಇರುವ ದಾಖಲೆಯ ಬಗ್ಗೆ ನಾನು ಹೇಳಬಹುದು. ಸದರಿ ನಿಡಿ - 4 ರ ಸತ್ಯಾಸತ್ಯತೆಯ ಬಗ್ಗೆ ನನಗೆ ಹೇಳಲು ಆಗುವುದಿಲ್ಲ.

1 ನೇ ಪ್ರತಿವಾದಿಯು ಸೃಷ್ಟಿಸಿರುವಂತಹ ವೀಲುನಾಮೆಯ ಆಧಾರದಲ್ಲಿ ಈ ಪ್ರಕರಣದ ದಾಖಲಿಸಿದ ನಂತರ ಕಂದಾಯ ಅಧಿಕಾರಿಗಳ ಸಮಕ್ಷಮ ಅವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಪ್ರಯತ್ನಿಸಿರುತ್ತಾರೆ ಎಂದರೆ, ಅದರ ನೋಟೀಸನ್ನು ಬೋರ್ಡ್ ನಲ್ಲಿ ಹಾಕಿರುವಂತಹ ಸಮಯದಲ್ಲಿ ನನಗೆ ಅದರ ವಿಚಾರ ತಿಳಿದಿರುತ್ತದೆ. ಅದಕ್ಕೆ ನಾವು ತಕರಾರು ಸಲ್ಲಿಸಿರುವುದಿಲ್ಲ. ವಾದಿಯರು ಸದರಿ ಅರ್ಜಿಗೆ ತಕರಾರು ಸಲ್ಲಿಸಿದ ವಿಚಾರ ನನಗೆ ನಂತರ ತಿಳಿದಿರುತ್ತದೆ. ಕಂದಾಯ ಅಧಿಕಾರಿಗಳ ಸಮಕ್ಷಮ ಅರ್ಜಿ ಸಲ್ಲಿಸುವ ಸಮಯದಲ್ಲಿ ನನ್ನ ಮತ್ತು 1 ನೇ ಪ್ರತಿವಾದಿಯ ಸಂಬಂಧ ಚೆನ್ನಾಗಿತ್ತು. ಸದರಿ ಪ್ರಕರಣ ದಾಖಲಿಸಿದ ವಿಚಾರ ತಿಳಿದ ನಂತರ ನಾವು 1 ನೇ ಪ್ರತಿವಾದಿಯ ಬಳಿ

ಅದರ ಬಗ್ಗೆ ವಿಚಾರಿಸಿದ್ದೇವೆ. 1 ನೇ ಪ್ರತಿವಾದಿಯು ಕಾರ್ಕಳ ಮತ್ತು ಮೂಡಬಿದ್ರೆಯ ಹಿರಿಯ ವಕೀಲರು ಒಬ್ಬರು ಎಂದರೆ ಸರಿ. ಅವರು ರೆವೆನ್ಯೂ ಅಧಿಕಾರಿಗಳ ಸಮಕ್ಷಮ ತಮ್ಮ ವಕೀಲ ವೃತ್ತಿಯನ್ನು ನಡೆಸುತ್ತಿದ್ದರು. ರೆವೆನ್ಯು ಅಧಿಕಾರಿಗಳ ಮೇಲೆ 1 ನೇ ಪ್ರತಿವಾದಿ ಪ್ರಭಾವ ಹೊಂದಿದ್ದರು ಎಂದರೆ ಸರಿ. ನಾನು ಡಿಗ್ರಿ ಮುಗಿಸಿರುವುದಿಲ್ಲ. ನಾನು ಕಂದಾಯ ಇಲಾಖೆಯ ಕೆಲಸಗಳನ್ನು ಮಾಡುತ್ತಿದ್ದೆ ಎಂದರೆ ಸರಿ. ನಾನು 1 ನೇ ಪ್ರತಿವಾದಿಯ ಜೊತೆ ಅವರ ಕಚೇರಿಗೆ ಹೋಗಿ ಕೆಲಸ ಮಾಡುತ್ತಿದ್ದೆ. ನನ್ನ ಬಳಿ ಇರುವಂತಹ ದಾಖಲೆಯಲ್ಲೂ ಸಹಾ ಮರಣ ಪ್ರಮಾಣ ಪತ್ರದ ನೊಂದಣಿ ಸಂಖ್ಯೆ 27/53 ಎಂದು ನಮೂದಾಗಿದೆಯೆ ಎಂದರೆ ನನಗೆ ಈಗ ನೆನಪಿರುವುದಿಲ್ಲ. ನಾನು ಮತ್ತು 1 ನೇ ಪ್ರತಿವಾದಿಯು ಸೇರಿ ನಮ್ಮ ಪ್ರಭಾವವನ್ನು ಬಳಸಿ, ನಿಡಿ - 4 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಜಿನ್ನಪ್ಪ ಹೆಗ್ಗಡೆಯವರು 1953 ರಲ್ಲಿ ಮರಣ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಅವರು 1957 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಸ್ವತ್ತಿನಲ್ಲಿ ಅವರಿಗೆ ಸೇರಬೇಕಾದಂತಹ ಪಾಲನ್ನು ತಪ್ಪಿ ಸುವ ಉದ್ದೇಶದಿಂದ ನಾನು ಮತ್ತು 1 ನೇ ಪ್ರತಿವಾದಿ ಸೇರಿ ಜಿನ್ನಪ್ಪ ಹೆಗ್ಗಡೆಯವರು 1953 ರಲ್ಲಿ ಮರಣ ಹೊಂದಿದ್ದಾರೆ ಎಂದು ಸಾಧಿಸುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯರ ದಾವಾ ಸ್ವತ್ತಿನ ಹಕ್ಕನ್ನು ಮರೆಮಾಚುವ ಉದ್ದೇಶದಿಂದ ನಿಡಿ - 5 ಮತ್ತು ನಿಡಿ - 6 ನ್ನು ನಾವಿಬ್ಬರೂ ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಎರಡೂ ದಾಖಲೆಗಳನ್ನು ಈ ಪ್ರಕರಣ ದಾಖಲಿಸುವವರೆಗೂ ನಾನು ನೋಡಿರುವುದಿಲ್ಲ. ನಿಡಿ - 4 ನ್ನು ಸಹಾ ಈ ಪ್ರಕರಣ ದಾಖಲಿಸುವವರೆಗೂ

ನಾನು ನೋಡಿರುವುದಿಲ್ಲ. ಜಿನ್ನಪ್ಪ ಹೆಗ್ಗಡೆಯವರ ಸಹಿಯನ್ನು ಮತ್ತು ಜಿನರಾಜ ಪಾಂಡಿಯವರ ಸಹಿಯನ್ನು ನಿಡಿ - 5(ಎ) ಮತ್ತು ನಿಡಿ - 5(ಡಿ) ಇವುಗಳನ್ನು ನಾನು ಗುರುತಿಸಲು ಆಗುವುದಿಲ್ಲ. ನಿಡಿ - 6 ರಲ್ಲಿ ಸಾಕ್ಷಿಗಳು ನಮೂದಿಸಿರುವಲ್ಲಿ ಯಾವುದೇ ಸಹಿಗಳು ನನಗೆ ಕಂಡು ಬರುವುದಿಲ್ಲ. ಆದರೆ ಹೆಸರು ಮತ್ತು ವಿಳಾಸ ಕಂಡು ಬರುತ್ತದೆ. ಅದರಲ್ಲಿ ಉಪೇಂದ್ರ ನಾಯಕ್ ರವರ ಸಹಿಯೂ ಕೂಡಾ ಕಾಣಿಸುವುದಿಲ್ಲ.

ಪಹಣಿ ಪತ್ರಿಕೆಗಳನ್ನು ನಾನು ನೋಡಿದ್ದೇನೆ. ಅದರಲ್ಲಿ ನನ್ನ ತಂದೆಯ ಹೆಸರನ್ನು 1ನೇ ಪ್ರತಿವಾದಿ ಸೇರಿಸಿರುವುದಿಲ್ಲ. ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ನಮ್ಮ ಮತ್ತು ನಮಿರಾಜ್ ಪಾಂಡಿಯವರ ಜೊತೆ ಕುಟುಂಬದವರ ಸಂಬಂಧ ಚೆನ್ನಾಗಿತ್ತು. ಅಲ್ಲದೇ 1ನೇ ಪ್ರತಿವಾದಿಯ ಮೇಲೆ ಎಲ್ಲರಿಗೂ ಸಾಕಷ್ಟು ನಂಬಿಕೆ ಇತ್ತು. 1ನೇ ಪ್ರತಿವಾದಿಯು ಜಿನ್ನಪ್ಪ ಹೆಗ್ಗಡೆಯವರಿಗೆ ತಾವೊಬ್ಬರೇ ವಾರೀಸುದಾರರು ಎಂದು ನನ್ನ ಅಜ್ಜ ಮತ್ತು ಅಜ್ಜಿಗೆ ಸೇರಿದ ಕೋಟಿಗಟ್ಟಲೆ ಬೆಲೆಬಾಳುವ ಸ್ವತ್ತುಗಳನ್ನು ಮೋಸದಿಂದ ಮಾರಾಟ ಮಾಡಿರುವ ವಿಚಾರ ನಮಗೆ ತಿಳಿದಿದೆ. ಅವರು ಹಿರಿಯರಾದ ಕಾರಣ ಮತ್ತು ಅವರ ಮೇಲಿನ ಗೌರವದಿಂದ ನಾವುಗಳು ಅದನ್ನು ಪ್ರಶ್ನಿಸಿರುವುದಿಲ್ಲ. ಸದರಿ ವಿಚಾರ ನಮಗೆ ಈ ಪ್ರಕರಣ ದಾಖಲಾದ ನಂತರ ತಿಳಿದಿರುತ್ತದೆ. ಸದರಿ ಮೋಸದ

ದಾಖಲೆಗಳನ್ನು ಮಾಡಿದಂತಹ ವಿಚಾರ ನನಗೆ ತಿಳಿದಿದ್ದು, ನಾನು ಸಹಾ ಅವರೊಂದಿಗೆ ಶಾಮೀಲಾಗಿದ್ದೆ ಎಂದರೆ ಸರಿಯಲ್ಲ.

ನಿಪಿ - 28 ದಾಖಲೆಯನ್ನು ಮಾಡುವ ಸಮಯದಲ್ಲಿ ವಾದಿಗೆ ಸದರಿ ವಿಚಾರವನ್ನು ನಾವು ತಿಳಿಸಿರುವುದಿಲ್ಲ. ಪಹಣಿ ಪತ್ರಿಕೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಕಾರಣ ಅವರೇ ತಿಳಿಸಬೇಕಾಗಿತ್ತು. ಜಿನ್ನಪ್ಪ ಹೆಗ್ಗಡೆಯವರು ಮರಣ ಹೊಂದಿದ ನಂತರ ಅವರ ಎಲ್ಲಾ ಸ್ವತ್ತುಗಳಲ್ಲಿ ಅವರ ಎಲ್ಲಾ ಮಕ್ಕಳು ಜಂಟಿ ಸ್ವಾಧೀನದಲ್ಲಿದ್ದರು ಎಂದರೆ ಹೆಣ್ಣು ಮಕ್ಕಳು ಮದುವೆಯಾಗುವವರೆಗೂ ಮಾತ್ರ ಜಂಟಿ ಸ್ವಾಧೀನದಲ್ಲಿದ್ದರು. ನಾವು ಅಳಿಯ ಸಂತಾನ ಜೀವನ ಪದ್ಧತಿ ಅನುಸರಿಸುತ್ತೇವೆ. ಅಳಿಯ ಸಂತಾನದ ಪ್ರಕಾರ ಮದುವೆಯಾದರೂ ಸಹಾ ಹೆಣ್ಣು ಮಕ್ಕಳು ಅಪ್ಪನ ಮನೆಯಲ್ಲಿ ಬಂದಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ವಾದಿಯರು ಮದುವೆಯಾದರೂ ಸಹಾ ನಮ್ಮ ಕುಟುಂಬದ ಸ್ವತ್ತುಗಳಿಗೆ ಬಂದಿರುತ್ತಿದ್ದರು ಎಂದರೆ ಸರಿ. ಸುಮನಾಜಿಯವರೂ ಸಹಾ ಸ್ವತ್ತುಗಳಿಗೆ ಬಂದು ಹೋಗುತ್ತಿದ್ದರು. ದಾವಾ ಸ್ವತ್ತು ಕೃಷಿ ಭೂಮಿಯಾಗಿರುತ್ತದೆ. ಎಲ್ಲಾ ಕುಟುಬಂದವರು ಸೇರಿ ಮೊದಲು ಒಟ್ಟಿಗೆ ಕೃಷಿ ಮಾಡುತ್ತಿದ್ದೆವು ಎಂದರೆ ಸರಿ. ಮದುವೆಯಾದ ನಂತರ 1, 2 ನೇ ವಾದಿಯರು ಮತ್ತು ಸುಮನಾಜಿಯವರು ದಾವಾ ಸ್ವತ್ತುಗಳ ಸ್ವಾಧೀನ ಬಿಟ್ಟು ಕೊಟ್ಟಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ನಿಪಿ - 28 ದಾಖಲೆಯು ನನ್ನ ಪ್ರಕಾರ

ಸರಿಯಾಗಿರುತ್ತದೆ. ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು 1 ನೇ ಪ್ರತಿವಾದಿ ಸೇರಿ ನಿಪಿ - 28 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುವ ಸಮಯದಲ್ಲಿ ಹಲವಾರು ಬಾರಿ ಮೂಡಬಿದ್ರಿ, ಕಾರ್ಕಳ, ಮಂಗಳೂರಿನಲ್ಲಿ ರಾಜಿ ಸಂಧಾನ ಆಗಿರುತ್ತದೆ. ಅದರಲ್ಲಿ ನಿಡಿ - 2 ನ್ನು ನನಗೆ ತೋರಿಸಿದ್ದು, ಅದರ ಪ್ರಕಾರ ವಾದಿಯರು ರಾಜಿ ಸಂಧಾನದಿಂದ ಹಿಂದೆ ಬಂದಿರುವುದಿಲ್ಲ ಎಂದರೆ ಸರಿ. ಸದರಿ ರಾಜಿ ಯ ಪ್ರಕಾರವಾಗಿ 1 ನೇ ಪ್ರತಿವಾದಿಯು ನಡೆದುಕೊಳ್ಳದ ಕಾರಣ, ರಾಜಿಯಾಗಿರುವುದಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ ಕೇಳಿರುವ ಪ್ರಕಾರ ವಾದಿಯರಿಗೆ ಪಾಲು ನೀಡಲು ನನ್ನ ತಕರಾರು ಇರುವುದಿಲ್ಲ. ನಿಪಿ - 28 ಕಾನೂನು ಬಾಹಿರ ದಾಖಲೆ ಎಂದರೆ ಸರಿ. ವಾದಿಯರಿಗೆ ಅವರ ಹಕ್ಕನ್ನು ಮರೆಮಾಚುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಅಂಶಗಳನ್ನು ಸೇರಿಸಿ, ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮಧ್ಯಾಹ್ನ 3 ಗಂಟೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.

ಮಧ್ಯಾಹ್ನ 3 ಗಂಟೆಗೆ ಡಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.